ಶ್ರೀ ಹೆಚ್. ಹಾಲಪ್ಪ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು):

ಅ) ಸಹಕಾರಿ ಸಂಘ ಸಂಸ್ಥೆ –8907

ಖಾಸಗಿ ವಲಯ – 11259

ಆ) ಇಲ್ಲ. ಆದರೆ ನ್ಯಾಯಬೆಲೆ ಅಂಗಡಿಯವರು ಸರ್ಕಾರದ ಪೂರ್ವಾನುಮತಿ ಪಡೆದು ಪಡಿತರೇತರ ಸಾಮಗ್ರಿಗಳನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಮಾರಾಟ ಮಾಡಲು ಅವಕಾಶವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ಆನಾಸ: 260: ಡಿಆರ್ಎ: 99, ದಿನಾಂಕ 21.10.1999ರಂತೆ ನ್ಯಾಯಬೆಲೆ ಅಂಗಡಿಯನ್ನು ಆರ್ಥಿಕವಾಗಿ ಸದೃಢಗೊಳಿಸಲು ಹಿಂದೂಸ್ತಾನ್ ಲೀವರ್ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಇವರ ಉತ್ಪಾದನೆಗಳನ್ನು ಮಾರಲು ಅವಕಾಶ ಮಾಡಿಕೊಟ್ಟಿರುತ್ತದೆ. ಈ ಆದೇಶದನ್ವಯ ಸ್ಪಷ್ಟವಾಗಿ ಯಾವುದೇ ಕಾರಣಕ್ಕೂ ಪಡಿತರ ಸಾಮಗ್ರಿಗಳನ್ನು ಖಾಸಗಿ ಅಂಗಡಿಯಲ್ಲಿ ಮಾರಾಟ ಮಾಡುವುದನ್ನು ನಿಷೇಧಿಸಿದೆ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

902 ಶ್ರೀ ಜಯಚಂದ್ರ ಟಿ.ಬಿ.: ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ರೈತರಿಗೆ ಸಾಲ ನೀಡಲು ಕಳೆದ 5 ವರ್ಷಗಳಲ್ಲಿ ಸಹಕಾರ ಸಂಘ ಸಂಸ್ಥೆಗಳಿಗೆ ನೀಡಿದ ಹಣವೆಷ್ಟು;

ಆ) ರಾಜ್ಯದ ಒಟ್ಟಾರೆ ಶೇಕಡ ಎಷ್ಟು ಭಾಗ ರೈತರು ಸಾಲದ ಲಾಭವನ್ನು ಪಡೆದಿರುತ್ತಾರೆ;

ಇ) ಬೇರೆ ರಾಜ್ಯಗಳಿಗೆ ಹೋಲಿಸಿದಾಗ ರಾಜ್ಯದಲ್ಲಿ ಸಾಲ ಪಡೆದ ರೈತರ ಸಂಖ್ಯೆ ಬಹಳ ಕಡಿಮೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಈ) ಬಂದಿದ್ದಲ್ಲಿ, ರೈತರ ತೊಂದರೆಗಳನ್ನು ನಿವಾರಿಸಲು ಸದರಿ ಸಾಲದ ವ್ಯಾಪ್ತಿಗೆ ಹೆಚ್ಚು ರೈತರನ್ನು ತರಲು ಸರ್ಕಾರ ರೂಪಿಸಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ಕಳೆದ 5 ವರ್ಷಗಳಲ್ಲಿ ಸಹಕಾರಿ ಸಂಸ್ಥೆಗಳು ರಾಜ್ಯದ ರೈತರಿಗೆ ರೂ. 13,487.80 ಕೋಟಿಗಳ ಸಾಲ ನೀಡಿರುತ್ತವೆ.

(ರೂ. ಕೋಟಿಗಳಲ್ಲಿ)

ಕ್ರ. ಸಂ.	ವರ್ಷ	ಅಲ್ಪಾವಧಿ ಮತ್ತು ಮಧ್ಯಮಾವಧಿ	ದೀರ್ಘಾವಧಿ	ಒಟ್ಟು
1	2004–05	1304.11	85.62	1389.73
2	2005–06	2604.38	135.88	2740.26
3	2006–07	2412.31	224.69	2637.00
4	2007–08	2948.04	195.79	3143.83
5	2008–09	3405.09	171.89	3576.98
	ಒಟ್ಟು	**12673.93**	**813.89**	**13487.80**

ಆ) ಸಹಕಾರಿ ಸಂಸ್ಥೆಗಳ ಮೂಲಕ ಒಟ್ಟಾರೆ ಶೇಕಡ 26ರಷ್ಟು ರೈತರು ಸಾಲದ ಲಾಭವನ್ನು ಪಡೆದಿರುತ್ತಾರೆ.

ಇ) ಇಲ್ಲ.

ಈ) ರಾಜ್ಯದಲ್ಲಿ ರೈತರ ತೊಂದರೆಗಳನ್ನು ನಿವಾರಿಸಲು ರಾಜ್ಯ ಸರ್ಕಾರವು ದಿನಾಂಕ 1.4.2008 ರಿಂದ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ರೂಪಿಸಿರುತ್ತದೆ. ಕೃಷಿ ಸಾಲ ವಿತರಣೆಯಲ್ಲಿ ಶೇಕಡ 25ರಷ್ಟು ಹೊಸ ರೈತ ಸದಸ್ಯರಿಗೆ ಹಾಗೂ ಶೇಕಡ 18ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರೈತ ಸದಸ್ಯರಿಗೆ ತಪ್ಪದೆ ಸಾಲ ನೀಡಲು ದಿನಾಂಕ 18.6.2009ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ.

903 ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 'ಭಾಗ್ಯಲಕ್ಷ್ಮಿ' ಯೋಜನೆ ಎಂದಿನಿಂದ ಜಾರಿಗೆ ಬಂದಿದೆ; ಇದುವರೆಗೆ ಅನುಕೂಲ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ಇದಕ್ಕಾಗಿ ಠೇವಣಿ ಇಟ್ಟ ಹಣ ಎಷ್ಟು;

ಆ) ಬಾಂಡಿನಲ್ಲಿರುವ ಷರತ್ತುಗಳು (conditions) ಪರೋಕ್ಷವಾಗಿ ವಿಮಾ ಕಂಪನಿಗೆ ಸಹಾಯವಾಗುತ್ತದೆಯೇ ಹೊರತು ಮಕ್ಕಳಿಗೆ ಸಹಾಯವಾಗದಿರುವುದು ಸರ್ಕಾರ ಮನಗಂಡಿದೆಯೇ;

ಇ) ಈ ರೀತಿಯ ಬಾಂಡ್‌ನ್ನು ನೀಡುವ ಬದಲು ಹಣವನ್ನು ಬ್ಯಾಂಕಿನಲ್ಲಿಡುವುದು ಫಲಾನುಭವಿಗಳಿಗೆ ಹೆಚ್ಚಿನ ಸಹಾಯವಾಗುವುದಿಲ್ಲವೇ;

ಈ) ಈ ಬಗ್ಗೆ ಸರ್ಕಾರ ಪರ್ಯಾಯ ಚಿಂತನೆ ಮಾಡುವುದೇ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಭಾಗ್ಯಲಕ್ಷ್ಮಿ ಯೋಜನೆಯು 1.4.06 ರಿಂದ ಜಾರಿಗೆ ಬಂದಿರುತ್ತದೆ. ಇಲ್ಲಿಯವರೆವಿಗೆ 6,65,737 ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. ಇದಕ್ಕಾಗಿ ಇಲ್ಲಿಯವರೆಗೆ ರೂ. 750.66 ಕೋಟಿಗಳನ್ನು ಠೇವಣಿ ಇಡಲಾಗಿದೆ.